ಕರ್ನಾಟಕ ಸರ್ಕಾರ

# ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

**ವಾರ್ತಾ ಸೌಧ, ಸಂಖ್ಯೆ : 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು-560 001.**

**ಸಂಖ್ಯೆ : ವಾಸಾಸಂಇ/ಜಂನಿ/ಸುಮಪ/2020-21/** **ದಿನಾಂಕ : 29-11-2020**

## ಪತ್ರಿಕಾ ಪ್ರಕಟಣೆ

## ರಾಜೀವ್ ಗಾಂಧಿ ವಸತಿ ನಿಗಮ ನಿಯಮಿತ

**"1ಲಕ್ಷ ಬಹುಮಹಡಿ ಬೆಂಗಳೂರು ವಸತಿ ಯೋಜನೆ" ಅನುಷ್ಠಾನ**

**ಬೆಂಗಳೂರು, ನವೆಂಬರ್29 (ಕರ್ನಾಟಕ ವಾರ್ತೆ):**

ಬೆಂಗಳೂರು ನಗರ ಜಿಲ್ಲೆಯ ವಿವಿಧ ವಿಧಾನ ಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿ ರಾಜೀವ್ ಗಾಂಧಿ ವಸತಿ ನಿಗಮದ ವತಿಯಿಂದ ಅನುಷ್ಠಾನಗೊಳ್ಳುತ್ತಿರುವ "1 ಲಕ್ಷ ಬಹುಮಹಡಿ ಬೆಂಗಳೂರು ವಸತಿ ಯೋಜನೆ" ಕಾಮಗಾರಿ ಸ್ಥಳಗಳನ್ನು ವಸತಿ ಸಚಿವ ಹಾಗೂ ಕೊಡಗು ಜಿಲ್ಲಾ ಉಸ್ತುವಾರಿ ಸಚಿವ ವಿ. ಸೋಮಣ್ಣನವರು ವೀಕ್ಷಿಸಿದ್ದರು.

ಗಾಣಿಗರ ಹಳ್ಳಿ, ಸರ್ವೆ ನಂ. 74, ದಾಸರಹಳ್ಳಿ ವಿಧಾನ ಸಭಾ ಕ್ಷೇತ್ರ. ಅಗ್ರಹಾರ ಪಾಳ್ಯ, ಸರ್ವೆ ನಂ. 30, ಯಲಹಂಕ, ವಿಧಾನ ಸಭಾ ಕ್ಷೇತ್ರ ಗೋವಿಂದಪುರ, ಸರ್ವೆ ನಂ. 02, ಯಲಹಂಕ, ವಿಧಾನ ಸಭಾ ಕ್ಷೇತ್ರ ಬಿಳಿಜಾಜಿ, ಸರ್ವೆ ನಂ. 27, ಯಲಹಂಕ, ವಿಧಾನ ಸಭಾ ಕ್ಷೇತ್ರ ಪಿಳ್ಳಹಳ್ಳಿ, ಸರ್ವೆ ನಂ. 53, ಯಲಹಂಕ, ವಿಧಾನ ಸಭಾ ಕ್ಷೇತ್ರ, ಲಕ್ಷ್ಮೀಪುರ, ಸರ್ವೆ ನಂ. 63, ಯಲಹಂಕ, ವಿಧಾನ ಸಭಾ ಕ್ಷೇತ್ರಗಳನ್ನು ವೀಕ್ಷಿಸಿದ್ದರು.

ಬೆಂಗಳೂರು ನಗರ ಜಿಲ್ಲೆಯ ವ್ಯಾಪ್ತಿಯಲ್ಲಿ ಬರುವ 5 ತಾಲ್ಲೂಕುಗಳಲ್ಲಿನ ಸರ್ಕಾರಿ ಜಮೀನುಗಳಲ್ಲಿ ಶೀರ್ಷಿಕೆ "1 ಲಕ್ಷ ಬಹುಮಹಡಿ ಬೆಂಗಳೂರು ವಸತಿ ಯೋಜನೆ" ಅಡಿಯಲ್ಲಿ ರಾಜ್ಯ ಸರ್ಕಾರದ ವಸತಿ ಯೋಜನೆಗಳಾದ ಡಾ. ಬಿ. ಆರ್. ಅಂಬೇಡ್ಕರ್ ವಸತಿ ಯೋಜನೆ ಮತ್ತು

ವಾಜಪೇಯಿ ನಗರ ವಸತಿ ಯೋಜನೆಗಳನ್ನು ಕೇಂದ್ರ ಸರ್ಕಾರದ "ಪ್ರಧಾನ ಮಂತ್ರಿ ಆವಾಸ್ ಯೋಜನೆ (ನಗರ) ಸರ್ವರಿಗೂ ಸೂರು" ಯೋಜನೆಯ ಅನುದಾನದ ಮೊತ್ತಗಳನ್ನು ಸಂಯೋಜಿಸಿಕೊಂಡು ಹಾಗೂ ಫಲಾನುಭವಿಗಳ ವಂತಿಕೆಯೊಂದಿಗೆ ಮತ್ತು ಯೋಜನೆಯಡಿ ನಿರ್ಮಿಸುವ ನಿವೇಶನಗಳ ಅಥವಾ ಬಹುಮಹಡಿ ಮನೆಗಳ ಅಥವಾ ಉಳಿಕೆ ಜಮೀನನ್ನು ಮಾರಾಟ ಮಾಡಿ, ಮಾರಾಟದಿಂದ ಬರುವ ಮೊತ್ತದಿಂದ ಬೆಂಗಳೂರು ನಗರದಲ್ಲಿ ಆರ್ಥಿಕವಾಗಿ ಹಿಂದುಳಿದವರಿಗಾಗಿ (Unorganised Sector) ವಸತಿ ಯೋಜನೆಯನ್ನು ಜಿ+3 ಮಾದರಿಯಲ್ಲಿ ಕೈಗೊಳ್ಳಲು ಸರ್ಕಾರವು ಮಂಜೂರಾತಿ ನೀಡಿರುತ್ತದೆ.

ಬೆಂಗಳೂರು ನಗರ ಜಿಲ್ಲೆ ವ್ಯಾಪ್ತಿಯಲ್ಲಿ ಯೋಜನೆಯ ಅನುಷ್ಠಾನಕ್ಕಾಗಿ ಜಿಲ್ಲಾಧಿಕಾರಿಗಳು ಬೆಂಗಳೂರು ನಗರ ಜಿಲ್ಲೆ ಇವರ ವತಿಯಿಂದ ನಿಗಮಕ್ಕೆ 1014 ಎಕರೆ 10 ಗುಂಟೆ ಜಮೀನನ್ನು ಮುಪತ್ತಾಗಿ ನೀಡಲಾಗಿದೆ.

ಮೊದಲನೇ ಹಂತದಲ್ಲಿ ರೂ. 4475.54 ಕೋಟಿ ರೂ.ಗಳ ಮೊತ್ತದಲ್ಲಿ 46,499 ಬಹುಮಹಡಿ ಮನೆಗಳನ್ನು (ಜಿ+3 ಯಿಂದ ಎಸ್+14) ಮೂಲಭೂತ ಸೌಲಭ್ಯಗಳೊಂದಿಗೆ ನಿರ್ಮಿಸಲು ದಿನಾಂಕ: 24-11-2018 ರಂದು ಆಡಳಿತಾತ್ಮಕ ಅನುಮೋದನೆ ದೊರೆತಿರುತ್ತದೆ. ಈ ಪೈಕಿ ಈಗಾಗಲೇ 330 ಎಕರೆ ಜಮೀನಿನಲ್ಲಿ 43867 ಬಹುಮಹಡಿ ಮನೆಗಳನ್ನು (ಜಿ+3 ಯಿಂದ ಎಸ್+14) ಮೂಲಭೂತ ಸೌಲಭ್ಯಗಳೊಂದಿಗೆ ನಿರ್ಮಿಸಲು ಗುತ್ತಿಗೆದಾರರಿಗೆ ಕಾರ್ಯದೇಶ ನೀಡಲಾಗಿದೆ. ಈ ಪೈಕಿ 7446 ಬಹುಮಹಡಿ ಮನೆಗಳನ್ನು (ಜಿ+3 ಯಿಂದ ಎಸ್+14) ಮೂಲಭೂತ ಸೌಲಭ್ಯಗಳೊಂದಿಗೆ ನಿರ್ಮಿಸಲು ಮೆ॥ ಎನ್.ಸಿ.ಸಿ. ಲಿಮಿಟೆಡ್ ರವರಿಗೆ ವಹಿಸಿದ್ದು, ಕಾಮಗಾರಿಗಳು ಈ ಕೆಳಕಂಡ ಜಮೀನುಗಳಲ್ಲಿ ಪ್ರಗತಿಯಲ್ಲಿರುತ್ತದೆ.

**<u>ಗಾಣಿಗರಹಳ್ಳಿ ಸರ್ವೆ ನಂ. 74 - ದಾಸರಹಳ್ಳಿ:</u>**

ಗಾಣಿಗರಹಳ್ಳಿ ಸರ್ವೆ ನಂ. 74 ರ 5 ಎಕರೆ ಜಮೀನಿನಲ್ಲಿ "1 ಲಕ್ಷ ಬಹುಮಹಡಿ ಬೆಂಗಳೂರು ವಸತಿ ಯೋಜನೆ" ಯಡಿ 1 BHK ಯ 796 ಎಸ್+ 13 ಮಾದರಿ ಮನೆ ಹಾಗೂ 2 BHK ಯ 135 ಎಸ್+11 ಮಾದರಿ ಒಟ್ಟು 931 ಮನೆಗಳನ್ನು ನಿರ್ಮಿಸಲು ಮೆ॥ ಎನ್.ಸಿ.ಸಿ ಲಮಿಟೆಡ್ ರವರಿಗೆ ಗುತ್ತಿಗೆ ಮೊತ್ತ ರೂ. 95 ಕೋಟಿಗಳಿಗೆ ವಹಿಸಲಾಗಿದೆ. 1 BHK ಯ ಕಾರ್ಪೆಟ್ ವಿಸ್ತೀರ್ಣ 30 ಚ.ಮೀ (323 ಚ. ಅಡಿ) ಹಾಗೂ 2 BHK ಯ ಕಾರ್ಪೆಟ್ ವಿಸ್ತೀರ್ಣ 45 ಚ. ಮೀ. ಇರುತ್ತದೆ. 1 BHK ಯಲ್ಲಿ 1 ಹಾಲ್, 1

ಬೆಡ್ ರೂಮ್, 1 ಅಡುಗೆ ಮನೆಯೊಂದಿಗೆ Utility ಮತ್ತು ಪ್ರತ್ಯೇಕ ಸ್ನಾನದ ಮನೆ ಮತ್ತು ಶೌಚಾಲಯವಿರುತ್ತದೆ ಹಾಗೂ 2 BHK ಯಲ್ಲಿ 1 ಹಾಲ್, 2 ಬೆಡ್ ರೂಮ್ (ಶೌಚಾಲಯದೊಂದಿಗೆ 1 ಬೆಡ್ ರೂಮ್), 1 ಅಡುಗೆ ಮನೆಯೊಂದಿಗೆ Utility ಮತ್ತು ಸ್ನಾನದ ಮನೆ ಮತ್ತು ಶೌಚಾಲಯವಿರುತ್ತದೆ. ಸದರಿ ಮನೆಗಳನ್ನು Monolithic Shear Wall Design Concrete ಗೋಡೆಗಳಿಂದ ನಿರ್ಮಿಸಲಾಗುತ್ತಿದೆ. Vitrified Tiles ನ ನೆಲಹಾಸು, Granite Kitchen Platform, Acrylic Paint ಮತ್ತು ಕಾರಿಡಾರ್ ಗೆ ಗ್ರಾನೈಟ್ ನೆಲಹಾಸು ಅಳವಡಿಸಲಾಗುವುದು.

**ಅಗ್ರಹಾರಪಾಳ್ಯ ಸರ್ವೆ ನಂ. 30 ಯಲಹಂಕ**

ಅಗ್ರಹಾರಪಾಳ್ಯ ಸರ್ವೆ ನಂ. 30 ರ 5 ಎಕರೆ ಜಮೀನಿನಲ್ಲಿ "1 ಲಕ್ಷ ಬಹುಮಹಡಿ ಬೆಂಗಳೂರು ವಸತಿ ಯೋಜನೆ" ಯಡಿ 1 BHK ಯ 488 ಜಿ + 3 ಮಾದರಿಯ ಮನೆಗಳನ್ನು ನಿರ್ಮಿಸಲು ಮೆ॥ ಎನ್.ಸಿ.ಸಿ ಲಿಮಿಟೆಡ್ ರವರಿಗೆ ಗುತ್ತಿಗೆ ಮೊತ್ತ ರೂ. 48 ಕೋಟಿಗಳಿಗೆ ವಹಿಸಲಾಗಿದೆ. 1 BHK ಯ ಕಾರ್ಪೆಟ್ ವಿಸ್ತೀರ್ಣ 30 ಚ.ಮೀ (323 ಚ. ಅಡಿ) 1 ಹಾಲ್, 1 ಬೆಡ್ ರೂಮ್, 1 ಅಡುಗೆ ಮನೆಯೊಂದಿಗೆ Utility ಮತ್ತು ಪ್ರತ್ಯೇಕ ಸ್ನಾನದ ಮನೆ ಮತ್ತು ಶೌಚಾಲಯವಿರುತ್ತದೆ ಸದರಿ ಮನೆಗಳನ್ನು Monolithic Shear Wall Design Concrete ಗೋಡೆಗಳಿಂದ ನಿರ್ಮಿಸಲಾಗುತ್ತಿದೆ. Vitrified Tiles ನ ನೆಲಹಾಸು, Granite Kitchen Platform, Acrylic Paint ಮತ್ತು ಕಾರಿಡಾರ್ ಗೆ ಗ್ರಾನೈಟ್ ನೆಲಹಾಸು ಅಳವಡಿಸಲಾಗುವುದು.

**ಪಿಳ್ಳಹಳ್ಳಿ ಸರ್ವೆ ನಂ.53 - ಯಲಹಂಕ**

ಪಿಳ್ಳಹಳ್ಳಿ ಸರ್ವೆ ನಂ. 53 ರ 5 ಎಕರೆ 15 ಗುಂಟೆ ಜಮೀನಿನಲ್ಲಿ "1 ಲಕ್ಷ ಬಹುಮಹಡಿ ಬೆಂಗಳೂರು ವಸತಿ ಯೋಜನೆ" ಯಡಿ 1 BHK ಯ 306 ಜಿ + 3 ಮಾದರಿಯ ಮನೆಗಳನ್ನು ನಿರ್ಮಿಸಲು ಮೆ॥ ಎನ್.ಸಿ.ಸಿ ಲಿಮಿಟೆಡ್ ರವರಿಗೆ ಗುತ್ತಿಗೆ ಮೊತ್ತ ರೂ. 29.00 ಕೋಟಿಗಳಿಗೆ ವಹಿಸಲಾಗಿದೆ. 1 BHK ಯ ಕಾರ್ಪೆಟ್ ವಿಸ್ತೀರ್ಣ 30 ಚ.ಮೀ (323 ಚ. ಅಡಿ) 1 ಹಾಲ್, 1 ಬೆಡ್ ರೂಮ್, 1 ಅಡುಗೆ ಮನೆಯೊಂದಿಗೆ Utility ಮತ್ತು ಪ್ರತ್ಯೇಕ ಸ್ನಾನದ ಮನೆ ಮತ್ತು ಶೌಚಾಲಯವಿರುತ್ತದೆ. ಸದರಿ ಮನೆಗಳನ್ನು Monolithic Shear Wall Design Concrete ಗೋಡೆಗಳಿಂದ ನಿರ್ಮಿಸಲಾಗುತ್ತಿದೆ. Vitrified Tiles ನ ನೆಲಹಾಸು, Granite Kitchen Platform, Acrylic Paint ಮತ್ತು ಕಾರಿಡಾರ್ ಗೆ ಗ್ರಾನೈಟ್ ನೆಲಹಾಸು ಅಳವಡಿಸಲಾಗುವುದು.

ಮೂಲಭೂತ ಸೌಕರ್ಯಗಳಾದ: ರಸ್ತೆ, ಚರಂಡಿ, ಪಂಪ್ ರೊಂ. ಮಳೆ ನೀರು ಕೊಯ್ಲು, ಎಸ್.ಟಿ.ಪಿ. ಜಿ.ಎಲ್.ಎಸ್.ಆರ್/ಓ.ಹೆಚ್.ಟಿ, ಸಿಎ ಸೈಟ್ ಕಾಯ್ದಿರಿಸುವಿಕೆ. ನೀರು ಸರಬರಾಜು ಮತ್ತು ಒಳಚರಡಿ ವ್ಯವಸ್ಥೆ Arboriculture, ಕಾಂಪೌಂಡ್ ಗೋಡೆ, ಭದ್ರತಾ ಸಿಬ್ಬಂಧಿ ಕೊಠಡಿ ಹಾಗೂ ಸೌರ ವಿದ್ಯುತ್ ಬೀದಿ ದೀಪಗಳು ಇತ್ಯದಿಗಳಿಗೆ ಅವಕಾಶ ಕಲ್ಪಿಸಿದೆ.

**ಸಚಿವರ ಜೊತೆ ರಾಜೀವ್ ಗಾಂಧಿ ಹೌಸಿಂಗ್ ಕಾರ್ಪೋರೇಷನ್ ನ ವ್ಯವಸ್ಥಾಪಕ ನಿರ್ದೇಶಕ ರಾಮನಾಥ ಪ್ರಸಾಥ್, ಜಿಲ್ಲಾ ಪಂಚಾಯತ್ ಅಧ್ಯಕ್ಷ ಮರಿಸ್ವಾಮಿ, ದಾಸಹಳ್ಳಿ ಶಾಸಕ ಅರ್. ಮಂಜೂನಾಥ್ ಹಾಗೂ ಇತರ ಹಿರಿಯ ಅಧಿಕಾರಿಗಳು ಪರಿವೀಕ್ಷಣಾ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡಿದ್ದರು.**